# ಮಾದರಿ ಪ್ರಶ್ನೆ ಪತ್ರಿಕೆ : 1

ವಿಷಯ: ದ್ವಿತೀಯ ಭಾಷೆ ಕನ್ನಡ — ವಿಷಯ ಸಂಕೇತ: 33K

ಸಮಯ: 2:30 ಗಂಟೆ — ಗರಿಷ್ಠ ಅಂಕಗಳು: 80

I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ: 1x4=4

1. 'ಉದರ' ಪದ ನೀಡುವ ಅರ್ಥ:–

ಎ)ತಲೆ ಬಿ) ಕಣ್ಣು ಸಿ)ಹೊಟ್ಟೆ ಡಿ) ಬಾಯಿ

2. 'ಅರಸ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ:–

ಎ)ಎರಡು ಬಿ) ಮೂರು ಸಿ) ನಾಲ್ಕು ಡಿ) ಐದು

3. 'ವನ' ಪದದ ತದ್ಭವ ರೂಪ:–

ಎ) ಕಾಡು ಬಿ) ಅರಣ್ಯ ಸಿ) ತೋಟ ಡಿ) ಬನ

4. 'ಶಾಲೆಯಲ್ಲಿ' ಈ ಪದದ ವಿಭಕ್ತಿ ಪ್ರತ್ಯಯದ ಹೆಸರು:–

ಎ) ದ್ವಿತೀಯಾ ಬಿ) ಪ್ರಥಮಾ ಸಿ) ಸಪ್ತಮೀ ಡಿ) ಷಷ್ಠೀ

II ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ: 1x12=12

5. ವಿಷದ ಬಾಣವು ಮರಕ್ಕೆ ಏಕೆ ತಗುಲಿತು?
6. ಏಣಿ ಜನರಿಗೆ ಮಾಡಿದ ಉಪಕಾರವೇನು?
7. ಅಸಿ–ಮಸಿ ಎಂದರೇನು?
8. ಈ ನಾಡಿನ ಬೆನ್ನೆಲುಬು ಯಾರು?
9. ತಿಮಿರಕ್ಕೆ ವೈರಿ ಯಾವುದು?
10. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?
11. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
12. ಸಸ್ತನಿಗಳ ಆಶ್ರಯದಾಣಗಳು ಯಾವುವು?
13. ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ?
14. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?
15. ಧುರಕ್ಕೆ ಬೆನ್ನುಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?
16. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತ?

III ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 2x8=16

17. ನಮ್ಮ ದೇಶದ ರಕ್ಷಣಾ ಪಡೆ ಏಕೆ ಪ್ರಬಲವಾಗಿರಬೇಕು?

18. ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?

19. ಕರ್ಪೂರದ ಕೆಲಸವೇನು? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ?

20. ಪುಟ್ಟರಾಜ ಗವಾಯಿಗಳ ವೇಷಭೂಷಣಗಳು ಹೇಗಿದ್ದವು?

21. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?

22. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆ ಹೇಗೆ?

23. 'ಕಾದು ನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು?

24. ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತದೆ?

IV ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 3x1=3

25. ಅ.ರಾ.ಮಿತ್ರ:

V ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ: 3x1=3

26. ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು ಬಂದ ಮನುಜತೆಯ ಸಾರ್ಥಕತೆಗೆ

VI ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ. 3x1=3

27. 'ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ'

VII ಕೆಳಗಿನ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ: 3x1=3

28. 'ಕೈ ಕೆಸರಾದರೆ ಬಾಯಿ ಮೊಸರು'

ಅಥವಾ

'ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ'

VIII ಈ ಕೆಳಗಿನವುಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ: 5x3=15

29. 'ಅವನು ಬಂದರೆ ಕರೆದುಕೊಂಡು ಹೋಗು ತಾಯಿ'

30. 'ಬೊಬ್ಬೆ ಹೊಡೆದಾವೆ ಬಾಳೆ ಮೀನು'

31. 'ಅಗಲಿದ್ದು ಫಲವೇನು ಬಾನವಿಲದನಕ್ಕ'

32. 'ಇಲ್ಲಿ ವಾಸ್ತು ಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ'

33. ಎಮ್ಮರ ಮನೆಯ ನಾರಿಯರೆ ಸಾಕು'

IX ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ: 4x1=4

34. ಏಕಾಂಗಿ ವೀರನಂತೆ ---------

----------------------

----------------------

------------ ಕತ್ತಲಲ್ಲಿ ನಡೆದನು.

ಅಥವಾ

ಕಾಡು ಕಾಡು ಅಲೆದ ----------

----------------------

----------------------

------------ ಮಹಾ ಬೆಳಕೊಂದು ಕಂಡಿತು.

X ಕೆಳಗಿನ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳ ಉತ್ತರ ಬರೆಯಿರಿ: 4x1=4

35. ಗೋಪಾಲ ಮತ್ತು ಬನದ ಗೋಪಾಲನ ನಡುವೆ ನಡೆದ ಸಂಭಾಷಣೆ ಏನು?

ಅಥವಾ

ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿಯನ್ನು ಹೇಗೆ ವರ್ಣಿಸಲಾಗಿದೆ?

XI ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ: 2x2=4

36. ಪ್ರಕೃತಿ ಅನುಗ್ರಹವಿಲ್ಲದೆ ಸುಖ ಜೀವನವನ್ನು ನಡೆಸಲು ಯಾರಿಗೂ ಸಾಧ್ಯವಿಲ್ಲ ಎಂಬ ಅರಿವು ನಮ್ಮ ಪೂರ್ವಜರಿಗೆ ಇತ್ತು. ಪಂಚಭೂತಗಳೆನಿಸಿರುವ ಅಗ್ನಿ, ವಾಯು, ಭೂಮಿ, ನೀರು ಹಾಗೂ ಆಕಾಶವನ್ನು ದೈವತ್ವಕ್ಕೇರಿಸಿದರು. ಬೆಳಕು, ಶಾಖ, ಶಕ್ತಿಯನ್ನು ನೀಡುವ ಸೂರ್ಯನನ್ನು, ತಂಪು, ಶಾಂತಿ, ಮುದ ನೀಡುವ ಬೆಳದಿಂಗಳನ್ನು ನೀಡುವ ಚಂದ್ರನನ್ನು ಪ್ರೀತಿಯಿಂದ ಗೌರವಿಸಿದರು. ಕಾಡು ಮೇಡು ಗುಡ್ಡ ಪರ್ವತಗಳನ್ನು ಪೂಜಿಸುತ್ತಾ ಪ್ರಕೃತಿಯ ಆರಾಧಕರಾದರು. ಹಬ್ಬಹರಿದಿನಗಳ ಹೆಸರಿನಲ್ಲಿ ಗಿಡ, ಮರ, ಬಳ್ಳಿ, ಹೂವು, ಪ್ರಾಣಿ, ಪಕ್ಷಿಗಳನ್ನು ರಕ್ಷಿಸಿದರು. ಆಚರಣೆಯ ಹಿನ್ನೆಲೆಯಲ್ಲಿ ಸಮತೋಲನ ಆಹಾರವನ್ನು ಸೇವಿಸಿ ಆರೋಗ್ಯವಂತರಾದರು. ಹಾಡು, ಹರಿಕತೆ, ಭಜನೆ, ನೃತ್ಯ ಮುಂತಾದವುಗಳ ಹೆಸರಿನಲ್ಲಿ ಕಲೆ ಹಾಗೂ ಸಾಹಿತ್ಯವನ್ನು ಪೋಷಿಸಿ ಬೆಳೆಸಿ ಸುಸಂಸ್ಕೃತರಾದರು.

36. (ಅ) ಪೂರ್ವಜರು ದೈವತ್ವಕ್ಕೇರಿಸಿ ಏನನ್ನು ಗೌರವಿಸಿದರು?

36. (ಬ) ನಮ್ಮ ಪೂರ್ವಜರು ಸುಸಂಸ್ಕೃತರಾದ್ದು ಹೇಗೆ?

XII ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ: 4x1=4

37. ಸ್ವಚ್ಛಭಾರತ ಅಭಿಯಾನ

ಅಥವಾ

ವಿದ್ಯಾರ್ಥಿ ಜೀವನದಲ್ಲಿ ಶಿಸ್ತು

XIII ಕೆಳಗಿನವುಗಳಲ್ಲಿ ಯಾವುದಾದರೂ ಒಂಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ: 5x1=5

38. ನಿಮ್ಮನ್ನು ಕೋಲಾರದ ಸರ್ಕಾರಿ ಪ್ರೌಢಶಾಲೆಯ ರಮೇಶ/ರಮ್ಯ ಎಂದು ಭಾವಿಸಿಕೊಂಡು ನಿಮ್ಮ ಬಡಾವಣೆಯ ರಸ್ತೆಗಳನ್ನು ಸರಿಪಡಿಸುವಂತೆ ನಗರಸಭೆ ಆಯುಕ್ತರಿಗೊಂದು ಮನವಿ ಪತ್ರ ಬರೆಯಿರಿ:

ಅಥವಾ

ನಿಮ್ಮನ್ನು ಕೋಲಾರದ ಸರ್ಕಾರಿ ಪ್ರೌಢಶಾಲೆಯ ಸುರೇಶ/ಕಾವ್ಯ ಎಂದು ಭಾವಿಸಿಕೊಂಡು ಬೆಂಗಳೂರಿನಲ್ಲಿರುವ ನಿಮ್ಮ ತಂದೆಗೆ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಪತ್ರ ಬರೆಯಿರಿ:

# ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
## ಕೋಲಾರ ಜಿಲ್ಲೆ – ಕೋಲಾರ 2
## 10 ನೇ ತರಗತಿಯ ಮಾದರಿ ಪ್ರಶ್ನೆಪತ್ರಿಕೆ 2020-21

**ವಿಷಯ: ದ್ವಿತೀಯ ಭಾಷೆ – ಕನ್ನಡ** **ಅಂಕಗಳು : 80**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ:** **(4x1=4)**

1."ಸಿಡುಕು – ವಿಡುಕು" ಎಂಬ ಪದವು ಇದಕ್ಕೆ ಉದಾಹರಣೆಯಾಗಿದೆ
ಎ) ಅನುಕರಣಾವ್ಯಯ ಬಿ) ದ್ವಿರುಕ್ತಿ ಸಿ) ಜೋಡುನುಡಿ ಡಿ) ಪಡೆನುಡಿ

2. ಹೊಂಬೆಳಕು ಎಂಬ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
ಎ) ಕರ್ಮಧಾರಯ ಬಿ) ಕ್ರಿಯಾ ಸಿ) ದ್ವಂದ್ವ ಡಿ) ದ್ವಿಗು

3. ಜಾಣ ಎಂಬ ಪದವು ಈ ನಾಮಪದವಾಗಿದೆ
ಎ) ರೂಢನಾಮ ಬಿ) ಅಂಕಿತನಾಮ ಸಿ) ಅನ್ವರ್ಥನಾಮ ಡಿ) ಸರ್ವನಾಮ

4. ಮಹಾನುಭಾವ ಪದವು ಈ ಸಂಧಿಗೆ ಉದಾಹರಣೆಯಾಗಿದೆ
ಎ) ಸವರ್ಣದೀರ್ಘ ಬಿ) ಗುಣ ಸಿ) ವೃದ್ಧಿ ಡಿ) ಯಣ್

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:** **(12x1=12)**

5. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?
6. ಶ್ರೀ. ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?
7. ಈ ನಾಡಿನ ಬೆನ್ನೆಲಂಬು ಯಾರು?
8. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು?
9. ಕವಯತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?
10. ಬೋಧಿವೃಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?
11. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಸಿ.ಪಿ.ಕೆ ಹೇಳಿದ್ದಾರೆ?
12. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಒದು ಹೇಳುತ್ತಾರೆ?
13. ಕುಣಿಗಲ್ ಕೆರೆಯ ಅಕಾರವನ್ನು ಯಾವ ಹಣ್ಣಿಗೆ ಹೋಲಿಸಲಾಗಿದೆ?
14. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?
15. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?
16. ಗೋಪಾಲನ ಗೆಳೆಯರ ಹೆಸರೇನು?

**II. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **(8x2=16)**

17. ಇಂದ್ರನ ಪ್ರಕಾರ ಸಾಮಾನ್ಯವಾದ ಲೋಕವರ್ತನೆ ಯಾವುದು?
18. ತಾಯಿ ಸಿದ್ದಮ್ಮ ಪುಟ್ಟರಾಜರನ್ನು ಯಾವ ರೀತಿ ಆಶೀರ್ವದಿಸಿದರು?
19. ಹಕ್ಕಿಗಳು ಗೂಡುಗಳನ್ನು ಯಾವ ರೀತಿ ಅಲಂಕರಿಸುತ್ತವೆ?
20. ಏಣಿ ಹೇಳಿಕೊಳ್ಳುವ ಕಷ್ಟಗಳೇನು?
21. ಕರ್ಪೂರದ ಕೆಲಸವೇನು? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ?
22. ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು ಏಕೆ?
23. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?

24. ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ ಏನೆಂದು ಹೇಳಿದನು?

**IV. ಕೆಳಗಿನ ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ:**

25. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು **(3x1=3)**

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ: (3x1=3)**

26. ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಬಣಗುವ ಮರನ
ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವ

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ ಬರೆಯಿರಿ: (3x1=3)**

27. ಸೀತೆಯ ಮುಖಕಮಲ ಅರಳಿತು

**VII. ಕೆಳಗಿನ ಗಾದೆಮಾತುಗಳಲ್ಲಿ ಯಾವುದಾದರು ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ: (3x1=3)**

28. ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ

ಅಥವಾ

ಹಾಸಿಗೆ ಇದ್ದಷ್ಟು ಕಾಲು ಚಾಚು

**VIII. ಕೆಳಗಿನವುಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ: (5x3=15)**

29. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ
30. ಆ ಮಗುವಿಗೆ ಬಡತನದ ಬವಣೆಯೇಕೆ?
31. ನಮ್ರತೆಗೆ ನಾ ಕರಗುತ್ತೇನೆ
32. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?
33. ಭಾವಾ ತಂದಾನು ಬಣ್ಣದ ಸೀರೆ

**IX.ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ: (4x1=4)**

34. ಕಡೆಗೆ ಹಾಯವು ಕಂಗಳೀ ಬಲ
--------------
--------------
ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೊಯೆಂದ

ಅಥವಾ

ಎಂದೊಡರ್ಜುನ ನಗುತ ರಥವನು
-------------
--------------
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

**X. ಕೆಳಗಿನ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **(4x1=4)**

35. ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗ ವಿವರಿಸಿ

ಅಥವಾ

ಬಾಲಕ ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ವಿವರಿಸಿ

**XI. ಕೆಳಗಿನ ಗದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ:** **(2x2=4)**

36. ಸಿ. ವಿ . ರಾಮನ್ ಶಿಷ್ಯರನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು ತಮ್ಮ ಶಿಷ್ಯರೂ.

ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ತೀಳೆಂಬ ತಾರತಮ್ಯವಿರಕೂಡದು. ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು ಶಿಷ್ಯರು ನಡೆಸುವ ಸಂಶೋದನೆ ಅತ್ಯುತ್ತಮ ವರ್ಗದ್ದಾಗಿರಬೇಕು. ಇತರರನ್ನು ಸಮ್ಮನೆ ಅನುಸರಿಸುವುದು ಸರ್ವಥಾ ಕೂಡದು. ಸ್ವಂತಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರಿಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲಭಾಗಗಳಿಗೂ ಬೇಟೆಯಿತ್ತು. ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾರೆ. ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದೇನೆಂದರೆ ಬೆನ್ನು ತಟ್ಟಿ, ಅವನನ್ನು ಎಲ್ಲರ ಎದುರಿಗು ಹೊಗಳಿ ಅಟ್ಟಶ್ಯೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿ ಹೋಗುತ್ತಿದ್ದರು. ಸಂಶೋದನೆಗಳನ್ನು ಮತ್ತೆಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

**ಪ್ರಶ್ನೆಗಳು:**

1. ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏಗಾಗಿತ್ತು?
2. ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

**XII. ಕೆಳಗಿನ ಯಾವುದದರೂ ಒಂದು ವಿಷಯವನ್ನು ಕುರಿತು ಪ್ರಬಂದ ಬರೆಯಿರಿ:** **(4x1=4)**

37. ಪ್ರವಾಹಗಳಿಂದಾಗುವ ಅನಾಹುತಗಳು

ಅಥವಾ

ಉತ್ತಮ ಹವ್ಯಾಸಗಳು

**XIII.ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ:** **(5x1=5)**

38. ನಿಮ್ಮನ್ನು ರಾಮಸಂದ್ರ ಗ್ರಾಮದಲ್ಲಿರುವ "ಸುರೇಶ್" ಎಂದು ಭಾವಿಸಿಕೊಂಡು ನಿಮ್ಮ ಊರಿನ ರಸ್ತೆಯನ್ನು ಸಂಪಡಿಸುವಂತೆ ಕೋರಿ ಗ್ರಾಮ ಪಂಚಾಯಿತಿ ಅದ್ಯಕ್ಷರಿಗೆ ಪತ್ರ ಬರೆಯಿರಿ

ಅಥವಾ

ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಉಮ್ಮಿಸಲ್ಮ ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆದ ನಿಜ್ಞಾನ ವಸ್ತುಪ್ರದರ್ಶನವನ್ನು ಕುರಿತು ಮಂಡ್ಯದಲ್ಲಿರುವ ಅಕ್ಬರ ಪಾಷ ಎಂಬ ಹೆಸರಿನ ತಂದೆಗೆ ಪತ್ರ ಬರೆಯಿರಿ.

# ದ್ವಿತೀಯ ಭಾಷೆ:– ಕನ್ನಡ : 3

**ಗರಿಷ್ಠ ಅಂಕಗಳು :– 80**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ:–** 4x1=4

1. ಬೈಗು ಪದದ ಅರ್ಥ.
ಎ) ಬೇಕು ಬಿ) ಬೇಗ ಸಿ) ಬೆಳಗ್ಗೆ ಡಿ) ಸಂಜೆ
2. ಪಟಪಟನೆ ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.
ಎ) ಜೋಡಿ ನುಡಿ ಬಿ) ದ್ವಿರುಕ್ತಿ ಸಿ) ಅನುಕರಣಾವ್ಯಯ ಡಿ) ನುಡಿಗಟ್ಟು
3. ಹೆಗ್ಗುರಿ ಇದು ______ ಸಮಾಸವಾಗಿದೆ.
ಎ) ತತ್ಪುರುಷ ಬಿ) ದ್ವಿಗು ಸಿ) ಬಹುವ್ರೀಹಿ ಡಿ) ಕರ್ಮಧಾರೆಯ
4. ಲೋಪ ಸಂಧಿಗೆ ಉದಾಹರಣೆಯಾಗಿರುವ ಪದ.
ಎ) ಮಾತಿಲ್ಲ ಬಿ) ಕಾಶಿಯಲ್ಲಿ ಸಿ) ದೇವಾಲಯ ಡಿ) ವೀರೇಶ

**II. ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** 12x1=12

5. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿ ಕೊಂಡನು?
6. ಅಸಿ–ಮಸಿ ಎಂದರೇನು?
7. ಈ ನಾಡಿನ ಬೆನ್ನೆಲುಬು ಯಾರು?
8. ಪುಟ್ಟರಾಜರ ತಂದೆ ತಾಯಿಗಳ ಹೆಸರೇನು?
9. ಸಸ್ತನಿಗಳ ಆಶ್ರಯದಾಣಗಳು ಯಾವುವು?
10. ಗೋಪಾಲನ ಗೆಳೆಯರ ಹೆಸರೇನು?
11. ಎಣಿ ಜನರಿಗೆ ಮಾಡಿದ ಉಪಕಾರವೇನು?
12. ಸಿದ್ಧಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?
13. ತಿಮಿರಕ್ಕೆ ವೈರಿ ಯಾವುದು?
14. ಕುಣಿಗಲ್ ಕರೆ ಹೇಗೆ ಬಾಗಿದೆ?
15. ಧನ ವಿದ್ದವರಲ್ಲಿ ಇರಬೇಕಾದ ಗುಣ ಯಾವುದು?
16. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?

**III. ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 8x2=16

17. ಸಾಮಾನ್ಯವಾದ ಲೋಕವರ್ತನೆ ಯಾವುದು?
18. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?
19. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?
20. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು?
21. ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು ಏಕೆ?
22. ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?
23. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?
24. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದ್ದವು?

**IV. ಕವಿ /ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು /ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ** 3x1=3

25. ರಮೇಶಗೌಡ

**V. ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ** 3x1=3

26. ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ
ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು
ಕೂಡಲ ಸಂಗಮದೇವ

**VI. ಈ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯ ಮಾಡಿರಿ:–** 3x1=3

27. ಸೇನಾ ಸಾಗರ

**VII. ಈ ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ಬರೆಯಿರಿ:–** 1x3=3

28. "ಒಕ್ಕಲಿಗ ಒಕ್ಕದಿರೆ ಜಗವಲ್ಲ ಬಿಕ್ಕುವುದು"

ಅಥವಾ

ಹಾಸಿಗೆ ಇದ್ದಷ್ಟು ಕಾಲು ಚಾಚು.

**VIII. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಮಾಡಿರಿ:–** 3x5=15

29. "ಇಂಥಹ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ"
30. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ"
31. ಅಮ್ಮನ ಮಾತು ಸುಳ್ಳಾಗಲಾರದು!
32. ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು.
33. "ಭಾವ ತಂದಾನೆ ಬಣ್ಣದ ಸೀರೆ"

**IX. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ:–** 1x4=4

34. ಏಕಾಂಗಿ ವೀರನಂತೆ ____________________
____________________ ಕತ್ತಲಲ್ಲಿ ನಡೆದನು.

ಅಥವಾ

ಕಾಡು ಕಾಡು ಅಲೆದು ____________________
____________________ಮಹಾ ಬೆಳಕೇಂದು ಕಂಡಿತು

**X. ಕೆಳಗಿನ ಪಶ್ನೆಗಳಿಗೆ ಎಂಟು – ಹತ್ತು ವಾಕ್ಯದಲ್ಲಿ ಉತ್ತರಿಸಿ.** 4x1=4

35. ಸದ್ದು ಮಾಡದಿರು ಪದ್ಯದಲ್ಲಿ ನೀವು ಮೆಚ್ಚವ ಸಂದೇಶವನ್ನು ವಿಸ್ತರಿಸಿ ಬರೆಯಿರಿ.

ಅಥವಾ

ಸದ್ದು ಮಾಡದಿರು ಪದ್ಯದ ಸಾರಾಂಶವನ್ನು ಮಾನವೀಯ ಮೌಲ್ಯಗಳೊಂದಿಗೆ ವಿವರಿಸಿ.

**XI. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:–** 1x4=4 (2x2)

36. ವಿಜ್ಞಾನ ತಂತ್ರಜ್ಞಾನಗಳ ಸಂಕೀರ್ಣ ಪ್ರಪಂಚದಲ್ಲಿ ಅಬ್ದುಲ್ ಕಲಾಂ ಅವರು ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದು ಯಾವುದೇ ಪ್ರಶಸ್ತಿ ಪುರಸ್ಕಾರ, ಹಣ ಗಳಿಸಲಿಕ್ಕಲ್ಲಿ " ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂದುಗಳೆ,ಯಾರು ಅವರಗಳ ಸೇವೆ ಮಾಡುತ್ತಾರೋ ಅವರೇ ದೇವರಿಗೆ ಹತ್ತಿರವಾದವರು" ಇದು ಅವರ ಬದುಕಿನ ಮಂತ್ರ 1999 ರಲ್ಲಿ ಅವರು ತಮ್ಮ ಆತ್ಮ ಚರಿತ್ರೆ ಪ್ರಕಟಸಿದರು ತಾನೇಕೆ ಆತ್ಮಕಥೆ ಬರದೆ ಎಂದು ಪ್ರಶ್ನಿಸಿಕೊಂಡು ಅವರು ಹೀಗೆ ಉತ್ತರಿಸಿದ್ದಾರೆ "ನನ್ನ ಬದುಕು ಯಾರೋಬ್ಬರಿಗೆ ಅನುಕರಣೆಗೆ ಯೋಗ್ಯವಾದ ಮಾದರಿಯಾಗುತ್ತದೆಂಬ ಭ್ರಮೆ ನನಗಿಲ್ಲ ಯಾವುದೇ ಮೂಲೆಯಲ್ಲಿನ ಊರಿನಲ್ಲಿ ಹುಟ್ಟಿ ಸಾಮಾಜಿಕವಾಗಿ ಸೌಲಭ್ಯಗಳಿಂದ ವಂಚಿತವಾಗಿರುವ ಮಗುವಿಗೆ ಅದರಂಥದೆ ಪರಿಸರದಲ್ಲಿದ್ದ ನನ್ನ ಭವಿಷ್ಯ ಅರಳಿದ್ದನ್ನು ಓದಿದಾಗ ಭರವಸೆ ಮಾಡಬಹುದು ಅಂತಹ ತಾವು ಹಿಂದುಳಿದವರು ಅಸಮರ್ಥರು ಅನ್ನುವ ಭ್ರಮೆಯಿಂದ ಬಿಡುಗಡೆ ಹೊಂದಲು ನನ್ನ ಬದುಕು ಸ್ಫೂರ್ತಿ ನೀಡಬಹುದೇನೋ" ಎಂದು ಅಬ್ದುಲ್ ಕಲಾಂ ಹೇಳುತ್ತಾರೆ

ಅ) ಕಲಾಂ ಅವರು ಆತ್ಮಕತೆ ಬರೆದುದು ಏತಕ್ಕಾಗಿ ಎಂದು ಹೇಳುತ್ತಾರೆ?

ಆ) ಕಲಾಂ ಅವರ ಬದುಕಿನ ಮಂತ್ರ ಯಾವುದು?

**XII. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯಕ್ಕೆ ಪ್ರಬಂಧವನ್ನು ಬರೆಯಿರಿ.** 1x4=4

37. ಸ್ವಚ್ಛ ಭಾರತ ಅಭಿಯಾನ

ಅಥವಾ

ಪರಿಸರ ಸಂರಕ್ಷಣೆಯ ಇಂದಿನ ಆಗತ್ಯ

**XIII. ಈ ಕೆಳಗೆ ಕೊಟ್ಟಿರುವ ಪತ್ರಲೇಖನವನ್ನು ಒಂದು ಮಾತ್ರ ಬರೆಯಿರಿ.** 1x5=5

38. ನಿಮ್ಮನ್ನು ಚಿಕ್ಕಮಂಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಗುಬ್ಬಿಹಳ್ಳಿಯ ಸರ್ಕಾರಿ ಪ್ರೌಢಶಾಲೆಯ ತನುಜ ಎಸ್.ಎಂ ಎಂದು ಭಾವಿಸಿಕೊಂಡು ನಿಮ್ಮ ಊರಿನ ದೀಪಗಳನ್ನು ಸರಿಪಡಿಸುವಂತೆ ಕೋರಿ ನಿಮ್ಮ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಗೌರಿಬಿದನೂರಿನ ವಿನಾಯಕ ಪ್ರೌಢಶಾಲೆಯ ಮಮತ.ಕೆ.ಎಲ್ ಎಂದು ಭಾವಿಸಿಕೊಂಡು ತುಮಕೂರಿನಲ್ಲಿರುವ ನಿಮ್ಮ ತಂದೆಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಒಂದು ಪತ್ರ ಬರೆಯಿರಿ.

## 10ನೇ ತರಗತಿ ದ್ವಿತೀಯ ಭಾಷೆ ಕನ್ನಡ : 4

### ಮಾದರಿ ಪ್ರಶ್ನೆ ಪತ್ರಿಕೆ-2020-21

ಸಮಯ:2-30 ಒಟ್ಟು ಅಂಕ:80

**I. ಕೆಳಗೆ ಕೊಟ್ಟಿರುವ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಸರಿಯಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** 4x1=4

1. " ತಿರಸ್ಕಾರ" ಪದಕ್ಕೆ ವಿರುದ್ಧ ಪದವಿದು.
   1) ಪುರಸ್ಕಾರ 2) ಅಧಿಕಾರ 3) ಮೇಲಾಧಿಕಾರ 4) ಅಧಿಕಾರ
2. " ಸರ್ವಾಧಿಕಾರಿ" ಪದವು ಈ ಸಂಧಿಗೆ ಉದಾಹರಣೆ ಆಗಿದೆ.
   1) ಗುಣಸಂಧಿ 2) ಸುವರ್ಣಸಂಧಿ 3) ವೃದ್ಧಿಸಂಧಿ 4) ಯಣ್‌ಸಂಧಿ
3. " ಸಂತೋಷ" ಪದದ ತತ್ಸಮ-ತದ್ಭವ ರೂಪವಿದು.
   1) ಸಂತೋಷಿ 2) ಸಂತಸ 3) ಸಂತತ 4) ಸಂಗೀತ
4. ಅಂಕಿತ ನಾಮಕ್ಕೆ ಉದಾಹರಣೆ ಇದು.
   1) ಗಿಡ 2) ಹಳ್ಳಿ 3) ಗಂಗೆ 4) ಬೆಟ್ಟ

**II. ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** 12x1=12

5. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?
6. ಈ ನಾಡಿನ ಬೆನ್ನೆಲುಬು ಯಾರು?
7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
8. ಸಸ್ತನಿಗಳ ಆಶ್ರಯದಾಣಗಳು ಯಾವುವು?
9. ಪುಟ್ಟರಾಜರು ಯಾವಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?
10. ಗೋಪಾಲನ ಗೆಳೆಯರ ಹೆಸರೇನು?
11. ಏಣಿ ಜನರಿಗೆ ಮಾಡಿದ ಉಪಕಾರವೇನು?
12. ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು?
13. ತಿಮಿರಕ್ಕೆ ವೈರಿ ಯಾವುದು?
14. ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ?
15. ಕುಣಿಗಲ್ ಕೆರೆ ಯಾವ ದಿಕ್ಕಿನಲ್ಲಿದೆ?
16. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 8x2=16

17. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?
18. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?
19. ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು?
20. ಏಣಿ ಹೇಳಿಕೊಳ್ಳುವ ಕಷ್ಟಗಳೇನು?

21. ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?

22. ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ - ಈ ಮಾತಿನ ಅರ್ಥ ವೈಶಿಷ್ಟ್ಯವೇನು?

23. " ಕಾದು ನಡೆ" ಎಂದು ಅರ್ಜುನನು ಉತ್ತರನಿಗೆ ಏಕೆ ಒತ್ತಾಯಿಸಿದನು?

24. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು?

**IV. ಕೆಳಗಿನ ಕವಿಯ ಸ್ಥಳ, ಕಾಲಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** 1x3=3

25. ಕುವೆಂಪು

**V. ಈ ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥ ಮಾಡಿಕೊಂಡು ಮೌಲ್ಯವನ್ನು ಅನುಸರಿಸಿ ಸಾರಾಂಶ ಬರೆಯಿರಿ.** 1x3=3

26. ಕಾಡತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು
ಗೂಡಿನಲ್ಲಿ ಹಾಡು ಹುಟ್ಟಿ ಹೊಸರಾಗ ಕೇಳಿತು
ಮಕರಂದ ಸವಿಯಲೆಂದು ದುಂಬಿ ಹೂವ ಸೇರಿತು
ಗಿಡಗಿಡವು ಅಪ್ಪಿಕೊಂಡು ಕುಣಿದಂತೆ ಕಂಡಿತು.

**VI. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣದೊಂದಿಗೆ ಸಮನ್ವಯಗೊಳಿಸಿರಿ.** 1x3=3

27. ಮಗುವಿನ ಮುಖ ಚಂದ್ರನಂತೆ ಸುಂದರವಾಗಿದೆ.

**VII. ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.** 1x3=3

28. ಹಾಸಿಗೆ ಇದ್ದಷ್ಟು ಕಾಲು ಚಾಚು

**ಅಥವಾ**

ಕಾಯಕವೇ ಕೈಲಾಸ

**VIII. ಈ ಕೆಳಗಿನ ಹೇಳಿಕೆಯನ್ನು ಸಂದರ್ಭ ಸಹಿತ ವಿವರಿಸಿ.** 5x3=15

29. "ಇಂಥಹ ಒಣ ಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ"

30. "ಅರಿ ಹರಿಯುವುದರ ಬದಲು ಗುಡ್ಡಿನ ಹರಿದು ಕಣ್ಣು ಹೋಗಿಬಿಟ್ಟವು"

31. "ಇವರಿಗೆ ಭಾರ ಹೊತ್ತವರು ಕಾಳಜಿಯೇ ಇಲ್ಲ"

32. "ಸಿಡುಕು ಮಿಡಕನ ತೊರೆದು ಮೌನಿಯಾಗು"

33. "ವೇದಾಂತವನೋದಿ ಫಲವೇನಯ್ಯಾ"

**IX. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣ ಮಾಡಿರಿ.** 1x4=4

34. ಕೆಸರೊಳಿದ್ದರು ____________________ ಸಾರ್ಥಕತೆಗೆ

**ಅಥವಾ**

ಒಂದು ಬಾಣಕೆ ____________________ ಹಗಲಿರುಳು

**X. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 1x4=4

35. ಸದ್ದು ಮಾಡದೆ ಬಾಳಬೇಕು ಎಂಬುವುದನ್ನು ಕವಿ ಯಾವ ನಿದರ್ಶನಗಳ ಮೂಲಕ ತಿಳಿ ಹೇಳಿದ್ದಾರೆ?

**ಅಥವಾ**

ಬದುಕಿನಲ್ಲಿ ಶಾಂತಿ ಮತ್ತು ಸದ್ದು ಇವುಗಳಲ್ಲಿ ಯಾವುದು ಹೆಚ್ಚು ಸುಖ ನೀಡುತ್ತದೆ ಏಕೆ?

**XI. ಗದ್ಯಭಾಗವನ್ನು ಓದಿಕೊಂಡು ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿ.** 1x4=4

36. ಸಿ.ವಿ.ರಾಮನ್ ಶಿಷ್ಯರನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವನನ್ನು ಮಗನಂತರ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು ವಿಜ್ಞಾನದ ಅನ್ವೇಷಣಾ ಕಾರ್ಯದಲ್ಲಿ ನಾವೆಲ್ಲಾ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಉತ್ತಮ ವರ್ಗದ್ದಾಗಿರಬೇಕು, ಸ್ವಂತಿಕೆ ಇರಬೇಕು, ಹೊಸದಾರಿಯನು ಗುರುತಿಸಿ ಮುಮದುವರಿಯಬೇಕು ಎಂದು ಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೇ ಎಲ್ಲ ಭಾಗಗಳಿಗೂ ಬೇಟಿಯಿತ್ತು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಯಾರಾದರೂ ಒಬ್ಬ ಶಿಷ್ಯ ಹೊಸ ವಿಷಯವನ್ನು ಹೊರ ತಂದಿದ್ದರೆ ಬೆನ್ನು ತಟ್ಟಿ ಅವನನ್ನು ಎಲ್ಲರ ಎದುರಿಗೆ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಇದರಿಂದ ಶಿಷ್ಯರು ಮತ್ತಷ್ಟು ಹುರುಪಿನಿಂದ ಮುಂದುವರೆಯುತ್ತಿದ್ದರು.

36.(ಅ). ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?

36.(ಆ). ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ?

**XII. ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದಕ್ಕೆ 10-15 ವಾಕ್ಯಗಳಲ್ಲಿ ಪ್ರಬಂಧ ಬರೆಯಿರಿ.** 1x4=4

37. ಕೊರಾನವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಬರೆಯಿರಿ.

**ಅಥವಾ**

ಮೊಬೈಲ್ ಬಳಕೆಯಿಂದಾಗುವ ಅನಾಹುತಗಳನ್ನು ಬರೆಯಿರಿ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** 1x5=5

38. ನಿಮ್ಮನ್ನು ಕೋಲಾರದ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿ ಮೇಘನಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ವರದಿಯನ್ನು ಪ್ರಕಟಿಸುವಂತೆ ಕೋರಿ ಪ್ರಜಾವಾಣಿ ದಿನ ಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮ ಹೆಸರು ಗಿರಿಜಾ ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾ ಪ್ರಗತಿಯನ್ನು ಕುರಿತು ಊರಿನಲ್ಲಿರುವ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ.

:-:-:-:-:-

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ.

## ಹತ್ತನೇ ತರಗತಿ ದ್ವಿತೀಯ ಭಾಷೆ ಕನ್ನಡ : 5

**ಮಾದರಿ ಪ್ರಶ್ನೆ ಪತ್ರಿಕೆ** ಅಂಕಗಳು : 80

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ವಾಕ್ಯಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4 X 1 = 4

1. ಆಶ್ಚರ್ಯ – ಪದದ ತದ್ಭವ ರೂಪ
   ಎ) ಆಸರೆ ಬಿ) ಆಸ್ಪದ ಸಿ) ಅಚ್ಚರಿ ಡಿ) ಆಶ್ರಯ
2. ಇದು ಅನ್ವರ್ಥನಾಮಕ್ಕೆ ಉದಾಹರಣೆಯಾಗಿದೆ
   ಎ) ವಿದ್ವಾಂಸ ಬಿ) ಕಾವೇರಿ ಸಿ) ಗಗನ ಡಿ) ಮರ
3. ಮೊತ್ತ ಮೊದಲು – ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ
   ಎ) ಅನುಕರಣಾವ್ಯಯ ಬಿ) ದ್ವಿರುಕ್ತಿ ಸಿ) ಜೋಡುನುಡಿ ಡಿ) ಪಡೆನುಡಿ
4. ಬೇರೊಬ್ಬ – ಪದವು ಈ ಸಂಧಿಗೆ ಉದಾಹರಣೆ
   ಎ) ಆಗಮ ಬಿ) ಆದೇಶ ಸಿ) ಲೋಪ ಡಿ) ಗುಣ

**II.** ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 12 X 1 = 12

5. ವಿಷದ ಬಾಣವು ಮರಕ್ಕೆ ಏಕೆ ತಗುಲಿತು?
6. ಅಸಿ ಮಸಿ ಎಂದರೇನು?
7. ಏಣಿಗೆ ಬೀಳುವ ಭಯವಿಲ್ಲ ಏಕೆ?
8. ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?
9. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
10. ತಿಮಿರಕ್ಕೆ ವೈರಿ ಯಾವುದು?
11. ಸಸ್ತನಿಗಳ ಆಶ್ರಯದಾಣಗಳು ಯಾವುವು?
12. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?
13. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?
14. ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ?
15. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?
16. ಅರ್ಜುನನು ಯಾರನ್ನು ನಾಡನರಿ ಎಂದು [illegible] ಕರೆದಿದ್ದಾನೆ?

**III.** ಕೊಟ್ಟಿರುವ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 8 X 2 = 16

17. ಸಾಮಾನ್ಯವಾದ ಲೋಕವರ್ತನೆ ಯಾವುದು?
18. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ?
19. ನಮ್ಮ ದೇಶದ ರಕ್ಷಣಾ ಪಡೆ ಏಕೆ ಪ್ರಬಲವಾಗಿರಬೇಕು?
20. ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?

21. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?

22. ಒಡಲು ಒಡೆವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು?

23. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?

24. ವೈದ್ಯರು ಭೀಮಾನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?

**IV. ಕೊಟ್ಟಿರುವ ಕವಿ/ಸಾಹಿತಿಯ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿಗಳನ್ನು ವಾಕ್ಯರೂಪದಲ್ಲಿ ಬರೆಯಿರಿ.** 1 X 3 = 3

25. ಸುಕನ್ಯಾ ಮಾರುತಿ

**V. ಕೊಟ್ಟಿರುವ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** 1 X 3 = 3

26. ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು ಬಂದ ಮನುಜತೆಯ ಸಾರ್ಥಕತೆಗೆ

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ.** 1 X 3 = 3

27. ಸೀತೆಯ ಮುಖ ಕಮಲದಂತೆ ಸುಂದರವಾಗಿದೆ.

**VII. ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** 1 X 3 = 3

28. ತಾಳಿದವನು ಬಾಳಿಯಾನು

**ಅಥವಾ**

ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ

**VIII. ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ.** 5 X 3 = 15

29. ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಂ ಅಲ್ಲ

30. ಗೊತ್ತು ಗುರಿ ಇಲ್ಲದೆ ಕತ್ತಲಲ್ಲಿ ನಡೆದನು

31. ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು

32. ಭಾವ ತಂದಾನೆ ಬಣ್ಣದ ಸೀರೆ

33. ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ

**IX. ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** 1 X 4 = 4

34. ನೀರ ಕಂಡಲ್ಲಿ .................... **ಅಥವಾ** ಮರವಿದ್ದು ಫಲವೇನು ...........
....... ಕೂಡಲಸಂಗಮದೇವ .............. ಚೆನ್ನಮಲ್ಲಿಕಾರ್ಜುನ

**X. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** 1 X 4 = 4

35. ಗೋಪಾಲ ಮತ್ತು ಬನದ ಗೋಪಾಲನ ನಡುವೆ ನಡೆದ ಸಂಭಾಷಣೆ ಏನು ?

**ಅಥವಾ**

ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿಯನ್ನು ಹೇಗೆ ವರ್ಣಿಸಲಾಗಿದೆ?

**XI. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.** 2 X 2 = 4

36. ಶಕ ವರ್ಷ ಒಂದು ಸಾವಿರದ ಮೂವತ್ತೆಂಟನೆಯ ದುರ್ಮುಖಿನಾಮ ಸಂವತ್ಸರದ ಅಶ್ವಯುಜ ಶುದ್ಧ ದಶಮಿಯಂದು ದ್ವಾರಸಮುದ್ರದ ಸೇನೆ ತಲಕಾಡಿನ ಕಡೆಗೆ ಚೈತ್ರಯಾತ್ರೆ ಹೊರಟಿತು. ಮಳವಳ್ಳಿ ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು ಹೊಯ್ಸಳರ ಕೈ ಮೇಲಾಯಿತು. ಆಗ ಚೋಳ ಸೇನೆ ಕಂಗಾಲಾಯಿತು. ಆದಿಯಮ ಯುದ್ಧದಲ್ಲಿ ಮಡಿದ. ಅವನ ಸತ್ತ ಸುದ್ಧಿ ಕೇಳುತ್ತಲೇ ಚೋಳ ಸೇನೆ ದಿಕ್ಕಾಪಾಲಾಗಿ ಓಡಿತು. ತಲಕಾಡು ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈ ವಶವಾಯಿತು. ಸಮಸ್ತ ಸೇನೆಯು ತಲಕಾಡುಗೊಂಡನಿಗೆ ಜಯವಾಗಲಿ ಎಂದು ಜೈಕಾರ ಹಾಕಿತು.

**ಪ್ರಶ್ನೆಗಳು:** ಅ) ದ್ವಾರಸಮುದ್ರದ ಸೇನೆ ಎಲ್ಲಿ, ಯಾವಾಗ ದಂಡಯಾತ್ರೆ ಹೊರಟಿತು ?

ಆ) ಯುದ್ಧದ ಪರಿಣಾಮವೇನು ?

**XII. ಕೊಟ್ಟಿರುವ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** 1X4=4

37. ಜ್ಞಾನಾಭಿವೃದ್ಧಿಯಲ್ಲಿ ಗ್ರಂಥಾಲಯಗಳ ಪಾತ್ರ

**ಅಥವಾ**

ಸ್ವಚ್ಛಭಾರತ ಆಂದೋಲನದಲ್ಲಿ ಯುವ ಜನತೆಯ ಪಾತ್ರ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರವನ್ನು ಬರೆಯಿರಿ.** 1X5=5

38. ನಿಮ್ಮನ್ನು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದ ವಿನಾಯಕ ಪ್ರೌಢಶಾಲೆಯ ವಿದ್ಯಾರ್ಥಿ ರಮೇಶ್ / ರಮ್ಯ ಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ಬಂಟ್ವಾಳದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೊಂದು ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಕೋಲಾರದ ವಿವೇಕಾನಂದ ಶಾಲೆಯ ವಿದ್ಯಾರ್ಥಿ ಆದರ್ಶ್/ಅಂಕಿತ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ಪ್ರಜಾವಾಣಿ ದಿನಪತ್ರಿಕೆಯ ಸಂಪಾದಕರಿಗೊಂದು ಪತ್ರವನ್ನು ಬರೆಯಿರಿ.

*******************

ಅಭ್ಯಾಸ ಪತ್ರಿಕೆ: 1-6

# ಮಾದರಿ ~~ಪ್ರಶ್ನೆಪತ್ರಿಕೆಗಳು~~

10 ನೆಯ ತರಗತಿ | ದ್ವಿತೀಯ ಭಾಷೆ: ಕನ್ನಡ | ಅಂಕಗಳು: 80

ಸಮಯ: 2.30 ಗಂಟೆ

I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳನ್ನು ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ: 1x4=4

1. 'ನಂಜು' ಪದದ ಅರ್ಥ

   ಎ) ಮಂಜು ಬಿ) ಪಂಜು ಸಿ) ವಿಷ ಡಿ) ಅಮೃತ

2. 'ಅರಮನೆ' ಪದವು ಈ ಸಮಾಸಕ್ಕೆ ಉದಾಹರಣೆ

   ಎ) ಕರ್ಮಧಾರಯ ಬಿ) ತತ್ಪುರುಷ ಸಿ) ದ್ವಿಗು ಡಿ) ದ್ವಂದ್ವ

3. 'ಆಶ್ಚರ್ಯ' ಪದದ ತದ್ಭವ ರೂಪ

   ಎ) ಅಚ್ಚರಿ ಬಿ) ಅಕ್ಕರೆ ಸಿ) ಸಕ್ಕರೆ ಡಿ) ಮತ್ಸರ

4. 'ಹಕ್ಕಿಯನ್ನು' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ

   ಎ) ಪಂಚಮೀ ಬಿ) ದ್ವಿತೀಯಾ ಸಿ) ತೃತೀಯಾ ಡಿ) ಚತುರ್ಥಿ

II ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ: 1x12=12

5.ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?

6. ಈ ನಾಡಿನ ಬೆನ್ನೆಲುಬು ಯಾರು?

7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?

8. ಹಕ್ಕಿ ಗೂಡಿನಲ್ಲಿ ಯವುದರ ಸಮಯನ್ವತೆ ಇರುತ್ತದೆ?

9. ಗೋಪಾಲನ ಗೆಳೆಯರ ಹೆಸರೇನು?

10. ಪುಟ್ಟರಾಜರ ತಂದೆ ತಾಯಿಗಳ ಹೆಸರೇನು?

11. ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು?

12. ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?

13. ತಿಮಿರಕ್ಕೆ ವೈರಿ ಯಾವುದು?

14. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?

15. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?

16. ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?

III ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ: 2x8=16

17. ದೇಶದ ಅಭಿವೃದ್ಧಿ ಕುರಿತು ಜನರಾಡುವ ಮಾತುಗಳಾವುವು?

18. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು?

19. ನೀಲಿ ಸಾಮ್ರಾಟ ಹಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆಗಳೇನು?

20. ಏಣಿ ಹೇಳಿಕೊಳ್ಳುವ ಕಷ್ಟಗಳೇನು?

21. ಕುಣಿಗಲ್ ಕೆರೆ ಎಂಥವರನ್ನು ಬೆರಗುಗೊಳಿಸುವಂತಿತ್ತು ಏಕೆ?

22. ಶತ್ರುಬಲಕೆ 'ನಮೋ' ಎಂದು ಉತ್ತರನಿಗೆ ಏಕೆ ಹೇಳಿದನು?

23. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು?

IV ಈ ಕೆಳಗಿನ ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ:

24. ಕುವೆಂಪು 3x1=3

V ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ: 3x1=3

25. ಹಸಿಸೌದೆ ಬುಸುಗಟ್ಟಿ ದನಿಯೆತ್ತವುದಲ್ತೆ

ಕಡಿ ಸೋಕೆ ಮದ್ದು ಸಿಡಿದಬ್ಬರಿಪುದು

ಅಂತಿರದೆ ರವಿಕರಕ್ಕೆ ಕರಗುವಿಬ್ಬನಿವೊಲಿರು

ಸಿಡುಕು ಮಿಡುಕನು ತೊರೆದು ಮೌನಿಯಾಗು।

VI ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿ: 3x1=3

26. "ಮಗುವಿನ ಮುಖ ಕಮಲದಂತೆ ಅರಳಿದೆ"

VII ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ:

27. "ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ" 3x1=3

ಅಥವಾ

"ಬೆಳೆಯುವ ಸಿರಿ ಮೊಳಕೆಯಲ್ಲಿ"

VIII ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯಗಳನ್ನು ಬರೆಯಿರಿ: 3x5=15

28. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ"

29. "ಅವನು ಬಂದರೆ ಕರೆದುಕೊಂಡು ಹೋಗು ತಾಯಿ"

30. ಪ್ರೀತಿಯನ್ನು ಹುಡುಕಿಕೊಂಡು ಜನರ

31. ವೇದಾಂತವನೋದಿ ಫಲವೇನಯ್ಯಾ

32. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು

IX ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ: 4x1=4

33. ಏಕಾಂಗಿ ವೀರನಂತೆ--------

--------------------

--------------------

-------- ಕತ್ತಲಲ್ಲಿ ನಡೆದನು.

ಅಥವಾ

ಕಾಡು ಕಾಡು ----------------

--------------------------

--------------------------

---------------------- ಕಂಡಿತು.

X ಈ ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ: 4x1=4

34. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವೇನು?

ಅಥವಾ

ಗೋಪಾಲ ಮತ್ತು ಬನದ ಗೋಪಾಲನ ನಡುವೆ ನಡೆದ ಸಂಭಾಷಣೆ ಏನು?

XI ಈ ಕೆಳಗಿನ ಗದ್ಯಬಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ: 2x2=4

ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡು ಮೇಲೆ ಅವನಿಗೆ ಸಂಪೂರ್ಣ ಸ್ವಾಂತಂತ್ರ್ಯ ಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು. ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಬಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು. ಇತರರನ್ನು ಸುಮ್ಮನೆ ಅನುಸರಿಸುವುದು ಸಮಥಾ ಕೂಡದು. ಸ್ವಂತಿಕೆ ಇರಬೇಕು. ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೇ ಒಂದು ಸುತ್ತು ಹೊರಟು ಎಲ್ಲ ಬಾಗಗಳಿಗೂ ಭೇಟಿಯಿತ್ತು ಪ್ರತಿಯೊಬ್ಬ ಶಿಷ್ಯನು ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದೇನೆಂದರೆ, ಬೆನ್ನು ತಟ್ಟಿ ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪ್ರಶ್ನೆಗಳು:

35. (ಅ) ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾನೆ ಏನಾಗಿತ್ತು?

(ಆ) ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

XII ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ: 1x4=4

36. ಸ್ವಚ್ಛತಾ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

ಅಥವಾ

ಕೆರೆಗಳ ಮಹತ್ವ

XIII ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ: 1x5=5

37. ನಿಮ್ಮನ್ನು ಜೀವನಭೀಮಾನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ "ನಚಿಕೇತ್" ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಗಾಂಧಿ ಜಯಂತಿ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ "ವಿಜಯವಾಣಿ" ದಿನ ಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಗಂಗಾನಗರದ ನಿವಾಸಿ "ಶೈಲಜಾ" ಎಂದು ಭಾವಿಸಿಕೊಂಡು ನಿಮ್ಮ ಹುಟ್ಟು ಹಬ್ಬಕ್ಕೆ ಆಹ್ವಾನಿಸಿ ಮಂಡ್ಯದಲ್ಲಿ ನಿಮ್ಮ ಚಿಕ್ಕಮ್ಮ ಕಾಮಾಕ್ಷಿ ಅವರಿಗೆ ಪತ್ರ ಬರೆಯಿರಿ.